ಆದಕಾರಣ, ಸದರಿ ನಾಲೆಗಳಲ್ಲಿ ಬರುವ ಅಚ್ಚುಕಟ್ಟುದಾರರುಗಳಾಗಲಿ ಹಾಗೂ ಮಾನ್ಯ ಸದಸ್ಯರುಗಳಾಗಲಿ ರಾಯಬಸವನ ಕಾಲುವೆಯಿಂದ ಮೆ: ಜಿಂದಾಲ್ ಉಕ್ಕು ಕಾರ್ಖಾನೆಗಾಗಿ 24 ಎಂಜಿಡಿ ನೀರನ್ನು ನೀಡಿದಲ್ಲಿ ಅಚ್ಚುಕಟ್ಟುದಾರರಿಗೆ ನೀರಾವರಿಗಾಗಿ ತೊಂದರೆಯುಂಟಾಗುವುದೆಂಬ ಸಂದೇಹವನ್ನು ಪಡಬೇಕಿಲ್ಲ. ಈ ನೀರಿನ ಪ್ರಮಾಣವನ್ನು ಕರ್ನಾಟಕ ಕೋಟಾದಿಂದ ಭರಿಸಲಾಗುವುದೆಂದು ಮತ್ತೊಮ್ಮೆ ಸ್ಪಷ್ಟೀಕರಿಸುತ್ತೇನೆ.

ಶ್ರೀ ಜಿ. ಶಂಕರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರದಿಂದ ನನಗೆ ತೃಪ್ತಿಯಾಗಿದೆ. ಆದರೆ ಮಾನ್ಯ ಸಚಿವರು ಕೊಟ್ಟ ಆಶ್ವಾಸನೆಯನ್ನು ಕಾಯ್ದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಆ ಕಾಲುವೆಗೆ ಸುಮಾರು 20 ಕೋಟಿ ರೂಪಾಯಿಗಳ ವೆಚ್ಚ ಮಾಡಿ ಆಧುನೀಕರಣಗೊಳಿಸಿಕೊಡಲಾಗುವುದು. ಮಾನ್ಯ ಸದಸ್ಯರಿಗೆ ಏನು ಭರವಸೆ ಕೊಟ್ಟಿದ್ದೇನೆ ಅದನ್ನು ಕಾಯ್ದುಕೊಳ್ಳುತ್ತೇನೆ.

ರಾಜ್ಯದಲ್ಲಿ ಸಂಗ್ರಹಿಸಲಾಗುತ್ತಿರುವ ಅಧಿಕ ಪ್ರಮಾಣದ ಮರಳನ್ನು 5 ವರ್ಷಗಳವರೆಗೆ ಗುತ್ತಿಗೆ ನೀಡುತ್ತಿದ್ದು ಸರ್ಕಾರದ ಬೊಕ್ಕಸಕ್ಕೆ ತುಂಬಾ ನಷ್ಟವಾಗುತ್ತಿರುವುದರಿಂದ, ಮರಳಿನ ಪ್ರಮಾಣಕ್ಕೆ ಅನುಗುಣವಾಗಿ ಸ್ವಾಮ್ಯ ಶುಲ್ಕವನ್ನು ವಿಧಿಸುವ ಪದ್ಧತಿ ಅನುಷ್ಠಾನ ಗೊಳಿಸುವುದು.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸಂಗ್ರಹಿಸಲಾಗುತ್ತಿರುವ ಅಧಿಕ ಪ್ರಮಾಣದ ಮರಳನ್ನು 5 ವರ್ಷಗಳವರೆಗೆ ಗುತ್ತಿಗೆಗೆ ನೀಡಲಾಗುತ್ತಿದ್ದು ಸರ್ಕಾರದ ಬೊಕ್ಕಸಕ್ಕೆ ತುಂಬಾ ನಷ್ಟವಾಗುತ್ತಿರುವುದರಿಂದ ಮರಳಿನ ಪ್ರಮಾಣಕ್ಕೆ ಅನುಗುಣವಾಗಿ ಸ್ವಾಮ್ಯ ಶುಲ್ಕವನ್ನು ವಿಧಿಸುವ ಪದ್ಧತಿ ಅನುಷ್ಠಾನಗೊಳಿಸುವ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಡಿ. ಜಯರಾಮ್ : (ಗಣಿ ಮತ್ತು ಭೂವಿಜ್ಞಾನ ಸಚಿವರು) ರಾಜ್ಯದಲ್ಲಿ ಮರಳು ಸಾಗಾಣಿಕೆಯ ಬಗ್ಗೆ ಹಾಗೂ ಈ ರೀತಿಯ ಸಾಗಾಣಿಕೆ ಮಾಡಿ ಮರಳಿನ ಮೇಲೆ ರಾಜಧನ ವಸೂಲಿ ಮಾಡುವ ಕುರಿತು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994 ರಲ್ಲಿ ಕಾರ್ಯವಿಧಾನವನ್ನು ಅಳವಡಿಸಲಾಗಿದೆ. ಸದರಿ ನಿಯಮದಲ್ಲಿಯ ನಿಮಯಗಳ 21 ರಿಂದ 31 ರಲ್ಲಿನ ಉಪ ಬಂಧಗಳಲ್ಲಿ ವಿವರಿಸಿರುವಂತೆ ಆಸಕ್ತ ಸಾರ್ವಜನಿಕರಿಂದ ಮರಳು ಗುತ್ತಿಗೆ ನೀಡಲು ಕೋರಿ ಸಲ್ಲಿಸಲ್ಪಟ್ಟ ಅರ್ಜಿಗಳನ್ನು ಪರಿಶೀಲಿಸಿದ ನಂತರ ನಿಯಮ 8(5) (II) ರ ರೀತ್ಯ ಕಂದಾಯ ಇಲಾಖೆಯ ತಹಶೀಲ್ದಾರ್‌ರವರ ಅಭಿಪ್ರಾಯ ಪಡೆದು ಸದರಿ ಇಲಾಖೆಯ ಶಿಫಾರಸ್ಸಿನ ಮೇರೆಗೆ 5 ವರ್ಷಗಳ ಅವಧಿಗೆ ಮರಳನ್ನು ಸಾಗಿಸಲು ಗುತ್ತಿಗೆ ನೀಡಲಾಗುತ್ತದೆ. ಈ ರೀತಿ ಗುತ್ತಿಗೆ ನೀಡಲು ಗರಿಷ್ಟ ಮಿತಿ 25 ಎಕರೆಗಳಾಗಿರುತ್ತದೆ.

ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು 1994 ರ ಅನುಸೂಚಿ 2 ರಲ್ಲಿ ನಿಗಧಿಯಾಗಿರುವಂತೆ ಬೆಂಗಳೂರು, ಮೈಸೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರತಿ ಟನ್ ಮರಳಿಗೆ 25 ರೂ.ನಂತೆ, ಬೆಳಗಾಂ, ಧಾರವಾಡ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಪ್ರತಿ ಟನ್‌ಗೆ 20. ರೂ. ನಂತೆ ಮತ್ತು ಇತರೆ ಎಲ್ಲಾ ಜಿಲ್ಲೆಗಳಲ್ಲಿ ಪ್ರತಿ ಟನ್‌ಗೆ 15 ರೂ. ಗಳಂತೆ ಸಾಧಾರಣ ಮರಳಿನ ಮೇಲೆ ರಾಜಧನವನ್ನು ವಸೂಲು ಮಾಡಲಾಗುತ್ತಿದೆ. ಸಾಧಾರಣ ಮರಳಿನ ಮೇಲೆ ರಾಜಧನವನ್ನು ವಸೂಲು ಮಾಡಲಾಗುತ್ತಿದೆ. ಸಾಧಾರಣ ಮರಳಿನ ಗಣಿಗಾರಿಕೆ ಗುತ್ತಿಗೆ ಪಡೆದು ಸದರಿ ಪ್ರದೇಶದಿಂದ ಮರಳಿನ ಸಾಗಾಣಿಕೆ ಮಾಡುವ ಚಟುವಟಿಕೆಯಲ್ಲಿ ತೊಡಗಿದ್ದ ಭಾಗಗಳಲ್ಲಿ ಗುತ್ತಿಗೆದಾರರಿಂದ ಒಂದು ಎಕರೆಗೆ ವಾರ್ಷಿಕ ರೂ. 1000-00 ದಂತೆ ಸ್ಥಿರ ತೆರಿಗೆಯನ್ನು (ಡೆಡ್ ರೆಂಟ್) ವಸೂಲು ಮಾಡಲಾಗುವುದು.

ಇತ್ತೀಚಿನ ದಿನಗಳಲ್ಲಿ ಬೆಂಗಳೂರು ನಗರದಲ್ಲಿನ ಕಟ್ಟಡ ನಿರ್ಮಾಣ ಕಾರ್ಯಚಟುವಟಿಕೆಗಳು ಹೆಚ್ಚಾದ ಪರಿಣಾಮವಾಗಿ ಬೆಂಗಳೂರು, ತುಮಕೂರು, ಕೋಲಾರ ಹಾಗೂ ಮಂಡ್ಯ ಜಿಲ್ಲೆಗಳಿಂದ ಬೆಂಗಳೂರು ನಗರಕ್ಕೆ ಅನಧಿಕೃತವಾಗಿ ಮರಳು ಸಾಗಾಣಿಕೆ ಅತಿ ಹೆಚ್ಚು ಪ್ರಮಾಣದಲ್ಲಿ ನಡೆದಿದ್ದರೂ ಸಹ ಸರ್ಕಾರಕ್ಕೆ ಆದಾಯ ಬರದಿರುವುದನ್ನು ಗಮನಿಸಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಪೋಲೀಸ್ ಇಲಾಖೆಯ ಸಹಯೋಗದೊಂದಿಗೆ ಅನಧಿಕೃತವಾಗಿ ಸಾಧಾರಣ ಮರಳನ್ನು ಸಾಗಿಸುತ್ತಿದ್ದ ಲಾರಿಗಳನ್ನು ತಡೆದು ಲಾರಿ ಮಾಲೀಕರುಗಳ ಮೇಲೆ ಗುನ್ನೆಗಳನ್ನು ಹೂಡಿದ್ದರಿಂದ ಲಾರಿ ಮಾಲೀಕರ ಸಂಘವು ದಿನಾಂಕ 2-12-1996 ರಂದು ಮುಷ್ಕರ ಪ್ರಾರಂಭಿಸಿ ಸದರಿ ಮುಷ್ಕರವನ್ನು 16-12-1996 ರಿಂದ ಬಲಗೊಳಿಸಿತ್ತು. ಇದರ ಪರಿಣಾಮವಾಗಿ ಸಾರ್ವಜನಿಕರಿಗೆ ಆದ ತೊಂದರೆಯನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆ ಕರೆದು ಲಾರಿ ಮಾಲೀಕರ ಸಂಘದೊಂದಿಗೆ ಚರ್ಚೆ ನಡೆಸಿ ತುಮಕೂರು, ಕೋಲಾರ ಮತ್ತು ಮಂಡ್ಯ ಜಿಲ್ಲೆಗಳಿಂದ ಬೆಂಗಳೂರು ನಗರಕ್ಕೆ ಸಾಧಾರಣ ಮರಳನ್ನು ಸಾಗಿಸುವ ಪ್ರತಿ ಲಾರಿಗೆ ಮೂರು ತಿಂಗಳಿಗೆ ಒಂದು ಭಾರಿ ರೂ. 1000-00 ದರದಲ್ಲಿ ರಾಜಧನವನ್ನು ವಸೂಲು ಮಾಡುವ ಬಗ್ಗೆ ತೀರ್ಮಾನ ಕೈಗೊಂಡು ಅಂತೆಯೇ ದಿನಾಂಕ 24-12-96 ರಂದು ಆದೇಶ ಹೊರಡಿಸಲಾಗಿದೆ. ಈ ಆದೇಶಕ್ಕೆ ಅನುಸಾರವಾಗಿ ಕರ್ನಾಟಕ ಉಪ ಖನಿಜ ನಿಯಮಗಳು 1994 ಕ್ಕೆ ಸೂಕ್ತ ತಿದ್ದುಪಡಿ ಮಾಡಿ ಸದರಿ ತಿದ್ದುಪಡಿಯು ದಿನಾಂಕ 17-7-97 ರಿಂದ ಜಾರಿಗೆ ಬಂದಿದೆ. ಈ ಕ್ರಮದಿಂದ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಪ್ರಮಾಣದಲ್ಲಿ ಆದಾಯ ಬರುತ್ತಿದ್ದು ಇದನ್ನು ವೃದ್ಧಿಸಲು ಮಾರ್ಗೋಪಾಯಗಳನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳುವ ಕುರಿತು ಸರ್ಕಾರವು ಪರ್ಯಾಲೋಚಿಸುವುದು.

+ ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಹೇಳಿಕೆಯನ್ನು ನಾನು ನೋಡಿದೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ಸದನದಲ್ಲಿ ಇರುವುದರಿಂದ ಒಂದು ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ಯಾವ ರೀತಿ ಲಿಕ್ಕರ್ ಲಾಬಿ, ಗ್ರಾನೈಟ್ ಲಾಬಿ ಅಂತ ಇದೆಯೋ ಹಾಗೆಯೇ ಈ "ಮರಳು ಲಾಬಿ" ಎಂಬುದೊಂದು ಇದೆ ಎಂದು

ನನಗನಿಸುತ್ತಿದೆ. ನಾನು ಮೊನ್ನೆ ಪ್ರಶ್ನೋತ್ತರ ಸಂದರ್ಭದಲ್ಲಿ ಒಂದು ಪ್ರಶ್ನೆ ಕೇಳಿದ್ದೆ. ಆ ಪ್ರಶ್ನೆಯಲ್ಲಿ ನಾನು ಕೇವಲ ನಮ್ಮ ತಾಲ್ಲೂಕಿನ ಬಗ್ಗೆ ಮಾತ್ರ ಕೇಳಿದ್ದೆ. ಆ ಪ್ರಶ್ನೆಗೆ ನನಗೆ ಉತ್ತರ ಬಂದಿದೆ. ಇದರಲ್ಲಿ ಈಗ ತಾನೇ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಕಂದಾಯ ಇಲಾಖೆಯ ತಹಶೀಲ್ದಾರ್‌ರಿಂದ ಅನುಮತಿ ಪಡೆದು ಆ ಜಾಗವನ್ನು ಗುರುತುಮಾಡಿ ಕೊಟ್ಟಿರುತ್ತಾರೆ. ಮಾನ್ಯ ನಾಗೇಗೌಡರು ಜಂಟಿ ಸದನ ಸಮಿತಿ (ಗ್ರಾನೈಟ್) ಅಧ್ಯಕ್ಷರಾಗಿದ್ದಾಗ ಅವರೊಂದಿಗೆ ಸದರಿ ಸಮಿತಿಯ ಸದಸ್ಯನಾಗಿ ನಾನು ಸಮಿತಿಯೊಂದಿಗೆ ಅನೇಕ ಕಡೆ ಹೋಗಿದ್ದೆ. ಗ್ರಾನೈಟ್‌ನಲ್ಲೂ ಕೂಡ ಇದೇ ರೀತಿ ಸ್ಥಳವನ್ನು ಕೊಟ್ಟಿರುತ್ತಾರೆ. ಆದರೆ, ಅರಣ್ಯ ಇಲಾಖೆಯ ಅಧಿಕಾರಿಗಳು, ರೆವಿನ್ಯೂ ಇಲಾಖೆಯ ಅಧಿಕಾರಿಗಳು, ಗಣಿ ಇಲಾಖೆಯ ಅಧಿಕಾರಿಗಳು ಇವರೆಲ್ಲರ ಜೊತೆಯಲ್ಲಿ ಹೋದಾಗಲೂ ಕೂಡ ಗುತ್ತಿಗೆ ಕೊಟ್ಟಂತಹ ಜಾಗ ಯಾವುದು ಎಂದು ತೋರಿಸಲಿಕ್ಕೆ ಅವರಿಗೆ ಸಾಧ್ಯವಾಗಲಿಲ್ಲ. ಅಷ್ಟೂ ಜಾಗದಲ್ಲಿ ಕಲ್ಲು ತೆಗೆದಿದ್ದನ್ನು ನಾವು ನೋಡಿಕೊಂಡು ಬಂದಿದ್ದೇವೆ. ನಾನೊಂದು ಸಣ್ಣ ಉದಾಹರಣೆಯನ್ನು ತಮಗೆ ಕೊಡಲಿಕ್ಕೆ ಇಚ್ಛಿಪಡುತ್ತೇನೆ. ನಮ್ಮ ಸಕಲೇಶಪುರ ತಾಲ್ಲೂಕಿನಲ್ಲಿ 35 ಜನ ಗುತ್ತಿಗೆದಾರರು ಇದ್ದಾರೆ. 35 ಜನ ಗುತ್ತಿಗೆದಾರರಲ್ಲಿ 16 ಜನ ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಇದುವರೆಗೆ ಗುತ್ತಿಗೆ ಕೊಟ್ಟಿರತಕ್ಕ ಸುಮಾರು 96 ಎಕರೆ ಜಾಗದಲ್ಲಿ 63 ಎಕರೆ ಒಂದೇ ಕುಟುಂಬಕ್ಕೆ ಸೇರಿದೆ. ಇನ್ನುಳಿದ 2-3 ಜನ ಅವರ ಸಂಬಂಧಿಕರಿಗೆ ಗುತ್ತಿಗೆ ನೀಡಲಾಗಿದೆ. ಅಂದ ಮೇಲೆ ಒಂದೇ ಕುಟುಂಬ ಈ ಒಂದು ತಾಲ್ಲೂಕಿನಲ್ಲಿ ವ್ಯವಹಾರ ಮಾಡುತ್ತಿದೆ. ನಾನು ಲೆಕ್ಕಾಚಾರ ಮಾಡಿರುವ ರೀತಿಯಲ್ಲಿ ಸಕಲೇಶಪುರ ತಾಲ್ಲೂಕಿನಲ್ಲಿ ಪ್ರತಿ ನಿತ್ಯ 150-200 ಲೋಡ್ ಮರಳನ್ನು ಬೇರೆಡೆ ಸಾಗಿಸಲಾಗುತ್ತಿದೆ. ಸರ್ಕಾರ ಕೊಟ್ಟಿರುವ ಮಾಹಿತಿ ಬಿಟ್ಟು ಬೇರೆಯದು ನಾನು ಹೇಳುತ್ತಿದ್ದೇನೆ. ಇವತ್ತು ಒಂದು ಲೋಡ್ ಮರಳಿಗೆ 200 ರೂಪಾಯಿ ಬೆಲೆ ಇದೆ. ನಾನು ಲೆಕ್ಕ ಹಾಕಿರುವ ರೀತಿಯಲ್ಲಿ ಸುಮಾರು 2 ಲಕ್ಷ ರೂಪಾಯಿಗಳ ವ್ಯವಹಾರ ಒಂದೇ ತಿಂಗಳಿನಲ್ಲಿ ನಡೆಯುತ್ತದೆ. ತಿಂಗಳಿಗೆ ಒಂದು ಸಾವಿರ ಲೋಡ್ ಮರಳಿನಂತೆ, ಲೋಡ್ ಒಂದಕ್ಕೆ 200 ರೂಪಾಯಿ ಲೆಕ್ಕ ಹಾಕಿದರೆ ತಿಂಗಳಿಗೆ 2 ಲಕ್ಷ ರೂಪಾಯಿಗಳ ವ್ಯವಹಾರವಾಗುತ್ತದೆ. ಈ ಮರಳಿನ ಗುತ್ತಿಗೆದಾರರಿಗೆ ಯಾವುದೇ ಆಫೀಸ್ ಇಲ್ಲ, ಕುರ್ಚಿ ಇಲ್ಲ, ಸಿಬ್ಬಂದಿ ಇಲ್ಲ, ಏನೇನೂ ಇಲ್ಲ. ಗುತ್ತಿಗೆ ತೆಗೆದುಕೊಂಡಿದ್ದು ಬಿಟ್ಟರೆ ಬೇರೇನೂ ಅವರ ಶ್ರಮ ಇದರಲ್ಲಿ ಇಲ್ಲ. ನನ್ನ ಮನೆಯ ಮುಂದಿರುವ ಮರಳನ್ನು ನಾನೇ ತೆಗೆದುಕೊಳ್ಳಬೇಕೆಂದರೂ ಟ್ರಾಕ್ಟರ್ ಲೋಡ್‌ವೊಂದಕ್ಕೆ 150 ರೂಪಾಯಿ ಕೊಡಬೇಕು. ಏಕೆಂದರೆ ಯಾರೋ ಒಬ್ಬ ಗುತ್ತಿಗೆದಾರ ಅಲ್ಲಿಂದ ಮರಳು ತೆಗೆಯುವ ಗುತ್ತಿಗೆ ತೆಗೆದುಕೊಂಡಿರುತ್ತಾನೆ. ಇವರು ಹೇಳಿರುವ ರೀತಿಯಲ್ಲಿ ಕೇವಲ ಲಾರಿಯ ಮಾಲೀಕರ ಬಗ್ಗೆ ಏನೋ ಗೊಂದಲವಾಯಿತು ಎಂದೇಳಿ ಸಾವಿರಾರು ರೂಪಾಯಿಗಳನ್ನು ಲಾರಿ ಮಾಲೀಕರಿಂದ ನೀವು ವಸೂಲು ಮಾಡುತ್ತಿದ್ದೀರಿ. ಆದರೆ, ಇಲ್ಲಿ ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತಿದೆ ಎಂಬ ಬಗ್ಗೆ ನೀವು ಗಮನಹರಿಸಿಲ್ಲ. ಈ ದಿಸೆಯಲ್ಲಿ ನನ್ನ ಸಲಹೆ ಏನೆಂದರೆ, ಸರ್ಕಾರಕ್ಕೆ ಇದರ ಬಗ್ಗೆ ನಿಜವಾದ ಅರ್ಥದಲ್ಲಿ ಕಳಕಳಿ ಇದ್ದರೆ, ಸರ್ಕಾರಕ್ಕೆ ಹೆಚ್ಚು ಉತ್ಪನ್ನ ಬರಬೇಕೆಂಬ ಆಸೆ ಇದ್ದರೆ, ಇವತ್ತು ನೀವೇನು ಹೆಂಡ ಸಾರಾಯಿಯನ್ನು ಹರಾಜು ಮಾಡುತ್ತೀರೋ ಅದೇ ರೀತಿಯಲ್ಲಿ ಏರಿಯಾಗಳನ್ನು ಫಿಕ್ಸ್ ಮಾಡಿ ಹರಾಜು ಮಾಡಿದ್ದೇ ಆದರೆ ಯಥೇಚ್ಛವಾದಂತಹ

ಹಣ ಸರ್ಕಾರಕ್ಕೆ ಬರಲಿಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಅಧಿಕಾರಿಗಳು ಗುತ್ತಿಗೆದಾರರ ಜೊತೆಯಲ್ಲಿ ಶಾಮೀಲಾಗಬಹುದು. ಐದು ವರ್ಷಗಳವರೆಗೆ ಒಬ್ಬರಿಗೆ ಗುತ್ತಿಗೆ ಕೊಡುವುದಾಗಿ ತಾವು ಹೇಳಿದ್ದೀರಿ. ಕೇವಲ ಒಂದೂವರೆ ಸಾವಿರ ರೂಪಾಯಿಗಳಿಗೆ ಒಬ್ಬನಿಗೆ ಒಂದು ಜಾಗವನ್ನು ಐದು ವರ್ಷಕ್ಕೆ ತಾವು ಗುತ್ತಿಗೆ ಕೊಡುತ್ತೀದ್ದೀರಿ. ಸನ್ಮಾನ್ಯ ಮಂತ್ರಿಗಳು ಹೇಳಿದಂತೆ ಒಬ್ಬ ಗುತ್ತಿಗೆದಾರ ಒಂದೂವರೆ ಸಾವಿರ ರೂಪಾಯಿಗಳು ಕೊಟ್ಟು ಪರ್ಮಿಷನ್ ತೆಗೆದುಕೊಂಡರೆ ಅವನು ಐದು ವರ್ಷಗಳವರೆಗೆ ಆ ಏರಿಯಾದಲ್ಲಿ ಮರಳು ತೆಗೆಯಬಹುದು. ಅಂದರೆ ಐದು ವರ್ಷಕ್ಕೆ ಅವನಿಗೆ ಎಷ್ಟು ದುಡ್ಡು ಬರುತ್ತದೆ? ಎಂಬುದನ್ನು ನಾವು ಲೆಕ್ಕ ಹಾಕಬಹುದಾಗಿದೆ. ಗ್ರಾನೈಟ್ ಲಾಬಿ, ಲಿಕ್ಕರ್ ಲಾಬಿ, ಹೀಗೆ ಈ ಎಲ್ಲಾ ಲಾಬಿಗಳಿಗಿಂತ ಅತ್ಯಂತ ಪ್ರಬಲವಾಗಿರತಕ್ಕಂತಹ ಲಾಬಿ ಇದಾಗಿದೆ. ಇದರ ಬಗ್ಗೆ ಯಾರಿಗೂ ಅಷ್ಟಾಗಿ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಸನ್ಮಾನ್ಯ ಮಂತ್ರಿಗಳಿಗೆ ನಾನು ಕೇಳುವುದಿಷ್ಟೆ. ಈ ರೀತಿ ಗುತ್ತಿಗೆ ಕೊಡುವ ಪದ್ಧತಿಯನ್ನು ತಕ್ಷಣ ನಿಲ್ಲಿಸಿ, ತಾವು ಅಧಿಕಾರಿಗಳೊಂದಿಗೆ ಕುಳಿತು ಚರ್ಚೆ ಮಾಡಿ ಎಲ್ಲೆಲ್ಲಿ ಮರಳು ತೆಗೆಯುವಂತಹ ಜಾಗಗಳಿವೆ ಎಂದು ಗುರುತಿಸಿ, ಆ ಜಾಗಗಳ ಗುತ್ತಿಗೆಯನ್ನು ಹರಾಜು ಮೂಲಕ ಕೊಡುವಂತಹ ವ್ಯವಸ್ಥೆ ಮಾಡಿದರೆ, ಅದರಿಂದ ಸರ್ಕಾರಕ್ಕೆ ಒಳ್ಳೆಯ ಆದಾಯ ಬರುತ್ತದೆ ಎಂದು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ನಮ್ಮ ಸಕಲೇಶಪುರದಿಂದ ಮರಳು ಕುಣಿಗಲ್ ಮತ್ತು ಮಡಿಕೇರಿಗಳಿಗೂ ಹೋಗುತ್ತದೆ.

ಶ್ರೀ ಎಸ್.ಡಿ. ಜಯರಾಂ : ತಾವು ಸಲಹೆ ನೀಡಿದಂತೆ ಮಾಡುತ್ತೇವೆ.

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಬೇಡಿಕೆಗಳ ಮಂಡನೆ.

ಬೇಡಿಕೆ ಸಂಖ್ಯೆ 11 - ಉನ್ನತ ಶಿಕ್ಷಣ

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಉನ್ನತ ಶಿಕ್ಷಣಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,27,47,04,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 15,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ 14 - ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ